ಬೆಟ್ಟದಪುರದ ರೈತನ ಬಳಿ ಎರಡು ಪ್ರಾಣಿಗಳಿದ್ದವು. ಒಂದು ನಾಯಿ ಮತ್ತು ಒಂದು ಹಂದಿ. ಅವುಗಳು ಒಂದಲ್ಲಾ ಒಂದು ದಿನ ತನಗೆ ಸಹಾಯ ಮಾಡುತ್ತವೆ ಎಂಬ ನಂಬಿಕೆಯಿಂದ ಆತ ಅವುಗಳನ್ನು ಸಾಕಿಕೊಂಡಿದ್ದನು. ಆದರೆ ಅವನ ನಂಬಿಕೆ ಸುಳ್ಳಾಗತೊಡಗಿತು. ಅವು ಸದಾ ಕಾಲ ಉಂಡು ತಿಂದು ಮಲಗಿ ನಿದ್ರಿಸುತ್ತಿದ್ದವು. ಒಂದು ದಿನ ರೈತ ಅವಕ್ಕೆ ನಿಷ್ಠೂರವಾಗಿ ಹೇಳಿದ– 'ನಾಳೆಯಿಂದ ನೀವು ಹೊಲಕ್ಕೆ ಹೋಗಿ ದುಡಿಯಬೇಕು'.

ಬೆಳಗಾಯಿತು, ಆ ಪ್ರಾಣಿಗಳು ವಿಧಿಯಿಲ್ಲದೆ ಹೊಲಕ್ಕೆ ಹೋದವು. ಹಂದಿಯು ತಾನು ಶ್ರಮಪಟ್ಟು ಕೆಲಸ ಮಾಡಿ ಯಜಮಾನನಿಗೆ ಸಂತೋಷ ನೀಡಬೇಕು ಎಂದು ಶ್ರಮದಿಂದ ನೆಲವನ್ನು ಅಗೆಯತೊಡಗಿತು. ಹೀಗೆ ಅದು ದಿನವೆಲ್ಲ ದುಡಿಯಿತು. ಆದರೆ ನಾಯಿ ಒಂದು ಮರದ ನೆರಳಿನಲ್ಲಿ ಮಲಗಿ ದಿನವನ್ನು ದೂಡಿತು. ಸಂಜೆಯಾದಾಗ ಆಯಾಸದಿಂದ ತೂರಾಡುತ್ತ ಹಂದಿ ರೈತನ ಮನೆಗೆ ಬಂದಿತು. ಆದರೆ ನಾಯಿಯು ಸ್ವಲ್ಪ ಹೊತ್ತು ಹೊಲದಲ್ಲೆ ಉಳಿದುಕೊಂಡು, ಹೊಲದ ತುಂಬಾ ಓಡಾಡಿ ಹಂದಿಯ ಹೆಜ್ಜೆ ಗುರುತುಗಳನ್ನೆಲ್ಲಾ ಅಳಿಸಿ ಹಾಕಿತು. ಬದಲಿಗೆ ತನ್ನ ಪಾದದ ಹೆಜ್ಜೆ ಗುರುತು ಕಾಣುವಂತೆ ಮಾಡಿತು. ಆಮೇಲೆ ಅದು ರೈತನ ಮನೆಗೆ ಹಿಂದಿರುಗಿತು.

ಆ ರಾತ್ರಿ ರೈತ ಪ್ರಾಣಿಗಳನ್ನು ಕುರಿತು, 'ನೀವು ಹೇಗೆ ದುಡಿದಿರಿ?' ಎಂದು ಪ್ರಶ್ನಿಸಿದನು. ಹಂದಿಯು 'ನಾನು ಹೊಲವನ್ನೆಲ್ಲಾ ಅಗೆದು ಹಾಕಿದೆ' ಎಂದು ಹೇಳಿತು. 'ಆದರೆ ನಾಯಿ ಮಾತ್ರ ಮರದ ನೆರಳಿನಲ್ಲಿ ಮಲಗಿತ್ತು' ಎಂದೂ ವರದಿ ಮಾಡಿತು. ನಾಯಿಯು ಮೋಸದ ನಗೆಯನ್ನು ಹೊಮ್ಮಿಸಿ 'ದಣಿ, ಹೊಲವನ್ನೆಲ್ಲಾ ಉತ್ತಿದ್ದು ನಾನೇ, ಈ ಸೋಮಾರಿ ಅಲ್ಲ' ಎಂದಿತು.

ರೈತನಿಗೆ ಗೊಂದಲವಾಯಿತು. ಆತ ಅವುಗಳ ಮಾತನ್ನು ನಂಬಲಿಲ್ಲ; 'ನಾನು ನಾಳೆ ಹೊಲಕ್ಕೆ ಹೋಗಿ ನೋಡುತ್ತೇನೆ' ಎಂದನು.

ಮಾರನೆ ದಿನ ರೈತ ಹೊಲಕ್ಕೆ ಹೋದಾಗ ಅಲ್ಲಿ ನಾಯಿಯ ಹೆಜ್ಜೆ ಗುರುತುಗಳು ಕಂಡವು. ಕೂಡಲೆ ಆತ ಮನೆಗೆ ಬಂದು ಹಂದಿಗೆ ಹಿಗ್ಗಾ ಮುಗ್ಗಾ ತಳಿಸಿದನು. 'ನೀನು ಸುಳ್ಳುಗಾರ, ನೀನು ಏನೂ ಕೆಲಸ ಮಾಡಿಲ್ಲ' ಎಂದು ಅಬ್ಬರಿಸಿದನು ರೈತ.

ಅಲ್ಲಿಂದೀಚೆಗೆ ನಾಯಿಯು ಮಾನವನ ಆಪ್ತಮಿತ್ರನಾಯಿತು ಮತ್ತು ಮನೆಯೊಳಗಡೆ ಜಾಗ ಪಡೆಯಿತು. ದುರದೃಷ್ಟ ಹಂದಿಯು ಮನೆಯ ಹೊರಗಡೆ ಅಲೆದಾಡುವಂತಾಯಿತು. ಈಗಲೂ ಹಂದಿಯು 'ತನ್ನ ಯಜಮಾನನಿಗೆ ನಿಜಸ್ಥಿತಿ ಅರಿವಾಗುತ್ತದೆ' ಎಂದು ಕಾಯುತ್ತಲೇ ಇದೆ.

(ಸಂಗ್ರಹ)